O.S. NO. 93/2014
DW - 2 .
Dated 05-01-2026.

ಸಾಕ್ಷಿಯನ್ನು ಈ ದಿನ ದಿನಾಂಕ 05-01-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಪಾಟಿ ಸವಾಲುಃ ವಾದಿಯರ ಪರವಾಗಿ ಶ್ರೀ ಎನ್ ಎಮ್ ಕೆ ವಕೀಲರಿಂದಃ

ನಾನು ದಿನಾಂಕ 05-02-2025 ಮತ್ತು ದಿನಾಂಕ 17-02-2017 ರಂದು ಸಲ್ಲಿಸಿದ ಸಾಕ್ಷಿ ಪ್ರಮಾಣ ಪತ್ರಗಳು ಒಂದೇ ಇದ್ದು ಅವುಗಳಲ್ಲಿ ಯಾವುದೇ ವ್ಯತ್ಯಾಸ ಇರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಗಳು ನಮ್ಮ ತಂದೆಯಿಂದ ಬಂದ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ಸದರಿ ಆಸ್ತಿಗಳನ್ನು ಹೊರತು ಪಡಿಸಿ ಬೇರೆ ಯಾವುದು ಪಿತ್ರಾರ್ಜಿತ ಆಸ್ತಿ ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಇನ್ನೊಂದು ಖರೀದಿ ಮಾಡಿದ ಆಸ್ತಿ ಇರುತ್ತದೆ ಎಂದು ಸ್ವತ ನುಡಿದಿರುತ್ತಾರೆ. ದಿನಾಂಕ 02-02-2024 ರಂದು ಸರ್ವೆ ನಂ. 29/3 ಮತ್ತು 34/2 ಬಿ ಈ 2 ಆಸ್ತಿಗಳನ್ನು ದಾವಾದಲ್ಲಿ ಸೇರಿಸಬೇಕೆಂದು ನಮ್ಮ ವಕೀಲರು ಸಲ್ಲಿಸಿದ್ದರು ಎಂದರೆ ಸರಿ. ಸದರಿ ಅರ್ಜಿ ಮೇಲೆ ವಿಚಾರಣೆ ಆಗಿ ದಿನಾಂಕ 13-02-2024 ರಂದು ಸದರಿ ಅರ್ಜಿ ವಜಾ ಆಯಿತು ಎಂದರೆ ಸರಿಯಲ್ಲ. ನಿಡಿ-10 ರಿತ್ಯ ಡೈರಿ 2000 ನೇ ಸಾಲಿನಲ್ಲಿ ಮಂಜೂರಾಗಿರುತ್ತದೆ ಎಂದರೆ ಸರಿ. ಆ ಸಮಯದಲ್ಲಿ ನನ್ನ ತಂದೆ ಜೀವಂತ ಇದ್ದರು ಎಂದರೆ ಸರಿ. ಸರ್ವೆ ನಂ. 29/2ಅ ಮತ್ತು 34/2ಬಿ ಆಸ್ತಿಗಳನ್ನು ವಾದಿಯರು ಖರೀದಿ ಮಾಡಿದ್ದರಿಂದ ಸದರಿ ಡೈರಿಗೆ ಮತ್ತು ಖರೀದಿ ಪತ್ರಕ್ಕೆ ನನ್ನ ತಂದೆ ತಕರಾರು ಮಾಡಿರುವುದಿಲ್ಲ ಎಂದರೆ ಸದರಿ ಆಸ್ತಿಗಳನ್ನು ನನ್ನ ತಂದೆ ಖರೀದಿ ಮಾಡಿದ್ದರು

ಎಂದು ನುಡಿದಿರುತ್ತಾರೆ. ನನ್ನ ತಂದೆಯವರು ಖರೀದಿ ಮಾಡಿದ್ದಲ್ಲ ವಾದಿಯರೇ ಖರೀದಿ ಮಾಡಿದ್ದರಿಂದ ನಾನಾಗಲಿ ಮತ್ತು ನನ್ನ ತಂದೆಯಾಗಲಿ ಸದರಿ ಡೈರಿ ಮತ್ತು ಖರೀದಿ ಪತ್ರಕ್ಕೆ ತಕರಾರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಡೈರಿ ನಂ. 6464 ನ್ನು ಪ್ರಶ್ನಿಸಿ ನಾವು ಮೇಲ್ಮನವಿ ವಗೈರೆ ಸಲ್ಲಿಸಿಲ್ಲ ಎಂದರೆ ಸರಿ. ವಾದಿಯರು ಮೂಲ ಖರಿದಿ ಪತ್ರ ನಿಪಿ – 15 ರಿತ್ಯ ಪ್ರಸ್ತುತ ದಾವೆಯಲ್ಲಿ ಹಾಜರುಪಡಿಸಿರುತ್ತಾರೆ ಎಂದರೆ ಸರಿ. ನಾನು ಹಾಜರು ಪಡಿಸಿದ ನಿಡಿ – 7 ರಿಂದ 13 ಇವುಗಳ ಮೇಲೆ ಈಗಾಗಲೇ ನ್ಯಾಯಾಲಯದಲ್ಲಿ ವಿಚಾರಣೆ ಆಗಿರುತ್ತದೆ ಮತ್ತು ಜವಾಬು ಸಹ ಆಗಿರುತ್ತದೆ ಎಂದರೆ ಸರಿ. ನಾನು ಈಗಾಗಲೇ ಸಲ್ಲಿಸಿದ ಸಾಕ್ಷಿ ಪ್ರಮಾಣ ಪತ್ರ ಕ್ಕೆ ಪಾಟಿ ಸವಾಲು ದಿನಾಂಕ 29–06–2017 ರಂದು ಪಾಟಿ ಸವಾಲು ಸಂಪೂರ್ಣ ಆಗಿರುತ್ತದೆ ಎಂದರೆ ಸರಿ. ಹೀಗಾಗಿ ಹೊಸದಾಗಿ ನನ್ನ ವಿಚಾರಣೆ ಮಾಡುವ ಯಾವುದೇ ಅಂಶಗಳು ಉಳಿದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಈಗ ಹಾಜರುಪಡಿಸಿದ ದಾಖಲೆಗಳು ಕುರಿತು ವಿಚಾರಣೆ ಆಗ್ದಿದರರೂ ಸಹ ನನ್ನ ವಕೀಲರಿಗೆ ತಪ್ಪು ಮಾಹಿತಿ ಕೊಟ್ಟು ಉದ್ದೇಶ ಪೂರ್ವಕವಾಗಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ . ದೇವಲಾಪುರದಲ್ಲಿ ಇರುವ ಮನೆಗಳನ್ನು ನನ್ನ ತಂದೆ ಯವರು ನಮಗೆ ಪ್ರತ್ಯೇಕವಾಗಿ ಹಂಚಿ ಕೊಟ್ಟಿರುತ್ತಾರೆ ಎಂದರೆ ಸರಿ. ಈ ಕುರಿತು ಪಂಚಾಯತಿ ಠರಾವು ನಂ. 4/1 ದಿನಾಂಕ 11–06–2007 ರಂದು ಮಂಜುರಾಗಿರುತ್ತದೆ ಎಂದರೆ ಸರಿ. ನನ್ನ ತಂದೆ ಹೆಸರಿನಲ್ಲಿ ಇದ್ದ ಆಸ್ತಿಗಳಿಗೆ ಪ್ರಸ್ತುತ ದಾವೆ ಸಲ್ಲಿಸಿದ್ದು ವಾದಿಯರು ಖರೀದಿ ಮಾಡಿದ ಆಸ್ತಿಗಳಲ್ಲಿ ನಮ್ಮದು ಯಾವುದೇ ಹಕ್ಕು ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕ 29–06–2017

ರಂದು ನನ್ನ ಪಾಟಿ ಸವಾಲಿನಲ್ಲಿ ನಾನು ದಾವಾ ಜಮಿನುಗಳು ನನ್ನ ತಂದೆ ಹೆಸರಿನಲ್ಲಿ ಇದ್ದು, ಉಳಿದ ಆಸ್ತಿಗಳು ವಿಭಾಗ ಮಾಡಿ ಕೊಟ್ಟಿರುವ ಪ್ರಕಾರ ನಾವು ಅವುಗಳ ಪ್ರತ್ಯೇಕ ಕಬ್ಜಾ ವಹಿವಾಟ ಮಾಡುತ್ತಾ ಬಂದಿರುತ್ತೇವೆ ಎಂದು ಒಪ್ಪಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆಯ ಹೆಸರಿನಲ್ಲಿ ಇರುವ ಆಸ್ತಿಗಳ ಕುರಿತು ನನ್ನ ತಂದೆ ಯಾವತ್ತು ಹಿಸ್ಸೆ ಮಾಡಿ ಕೊಟ್ಟಿರುವುದಿಲ್ಲ ಎಂದು ನುಡಿದಿರುತ್ತಾರೆ. ಸದರಿ ನನ್ನ ಪಾಟಿ ಸವಾಲಿನಲ್ಲಿ ನಾನು ಪ್ರತ್ಯೇಕ ಸಾಗುವಳಿ ಮಾಡುತ್ತಿದ್ದು ನಮ್ಮ ನಡುವೆ ಯಾವುದೇ ಬಿನ್ನಾಭಿಪ್ರಾಯಗಳು ಇಲ್ಲ ಎಂದು ಒಪ್ಪಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ವಾದಿಯರು ದಾವಾ ಆಸ್ತಿಗಳು ಮಾತ್ರ ನನ್ನ ಮತ್ತು ಅವರ ಸಾಮಾಹಿಕ ಕಬ್ಜಾ ವಹಿವಾಟನಲ್ಲಿ ಇರುವುದರಿಂದ ಬ್ಯಾಂಕನಲ್ಲಿ ಸಾಲ ಪಡೆಯುುವಗೊಸ್ಕರ ಮತ್ತು ಸರ್ಕಾರಿ ಸೌಲಭ್ಯ ಪಡೆಯಲು ಪಾಲು ವಿಬಾಗ ಮಾಡಿ ಕೊಡುವಂತೆ ನನ್ನನ್ನು ಕೇಳಿದರು ಎಂದರೆ ಸರಿಯಲ್ಲ. ಸದರಿ ಪಾಟಿ ಸವಾಲಿನಲ್ಲಿ ನಾನು ದಾವಾ ಜಮಿನುಗಳು ನನ್ನ ತಂದೆ ಹೆಸರಿನಲ್ಲಿ ಇರುವುದರಿಂದ ಅವುಗಳನ್ನು ಬಾಗ ಮಾಡಿಕೊಂಡು ನಮ್ಮ ನಮ್ಮ ಹೆಸರು ಹಚ್ಚಿಕೊಳ್ಳಲು ವಾದಿಯರು ಕೇಳಿದಾಗ ನಾನು ಅದನ್ನು ಇಂಕಾರ ಮಾಡಿರುತ್ತೇನೆ ಎಂದು ನಿಜ ಎಂದು ಒಪ್ಪಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಈಗಾಗಲೇ ಹೇಳಿದ ಜವಾಬಿಗೆ ವ್ಯತಿರಿಕ್ತತವಾಗಿ ಅದನ್ನು ಅಬಿವೃದ್ದಿ ಪಡಿಸುವ ಗೊಸ್ಕರ ಇದೊಂದು ಖೊಟ್ಟಿ ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಹೊರತು ಪಡಿಸಿ ನನ್ನದಾಗಲಿ ಮತ್ತು ಉಳಿದ ಪ್ರತಿವಾದಿಗಳದಾಗಲಿ ಯಾವುದೇ ಹಕ್ಕು ಹಿತಾಸಕ್ತಿ

ಇರುವುದಿಲ್ಲ ಎಂದರೆ ಸರಿಯಲ್ಲ. ಹೀಗಾಗಿ ನಾವು ಸದರಿ ವಾದಿಯರ ಹೆಸರಿಗೆ ಆದ ಖರೀದಿ ಪತ್ರ ಮತ್ತು ಡೈರಿಗೆ ಯಾವುದೇ ತಕರಾರು ವಗೈರೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ವಾದಿಯರಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಂದೆ ಖರೀದಿ ಮಾಡಿದ ಬೈಲಹೊಂಗಲ ಸಿಟಿ ಎಸ್ ನಂ. 2646 ಮನೆ ಆಸ್ತಿಯು ಯಾರದೊ 3 ನೇ ವ್ಯಕ್ತಿ ಕಬಾದಲ್ಲಿ ಇದೆ ಎಂದರೆ ಸರಿಯಲ್ಲ. ಸದರಿ ಮನೆ ಆಸ್ತಿ ಇವತ್ತಿಗೂ ನನ್ನ ತಂದೆ ಹೆಸರಿನಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಈ ಕುರಿತು ಯಾವುದಾದಾರು ದಾಖಲ ಹಾಜರು ಮಡಿದೀರಾ ಎಂದರೆ ಖರಿದಿ ಪತ್ರ ಹಾಜರು ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ. ಸಿಟಿ ಎಸ್ ನಂ. 2646 ಮನೆ 3 ನೇ ವ್ಯಕ್ತಿಯಿಂದ ಕಬಾ ಪಡೆದು ವಾದಿಯರಿಗೆ ಹಿಸ್ಸೆ ಕೊಡಿ ಎಂದ ಸೂಚಿಸಲಾಗಿ ಹಿರಿಯರ ಆಸ್ತಿ ಎಲ್ಲರಿಗೂ ಹಂಚಿ ಹೊಗಬೇಕು ಎಂದು ನುಡಿದಿರುತ್ತಾರೆ. ಸದರಿ ಮನೆ ಆಸ್ತಿ ಪ್ರಸ್ತುತ ದಾವೆಯಲ್ಲಿ ಸೇರಿಸಲು ಯಾವುದಾದರು ಕ್ರಮ ಕೈಗೊಂಡಿದ್ದೀರಾ ಎಂದರೆ ಇಲ್ಲ. ಸದರಿ ಮನೆ ಆಸ್ತಿ ನಮ್ಮದು ಅದರೆ ವಾದಿಯರು ಮತ್ತು ಪ್ರತಿವಾದಿಗಳು ಯಾರದು ಕಬ್ಜಾ ವಹಿವಾಟಿನಲ್ಲಿ ಇರುವುದಿಲ್ಲ ಎಂದರೆ ಸರಿ. ಸದರಿ ಕುರಿತು ಪ್ರಸ್ತುತ ದಾವೆಯಲ್ಲಿ ಈಗಾಗಲೇ ತಿರ್ಮಾನ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ವಾದಿಯರಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಪ್ರಸ್ತುತ ದಾವೆಯಲ್ಲಿ ಮಧ್ಯಂತರ ಅರ್ಜಿ ಹಾಕುತ್ತಾ

O.S. NO. 93/2014

DW - 2 .

Dated 05-01-2026.

ಕಾಲಹರಣ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ಹೊರತು ಪಡಿಸಿ ವಾದಿಯರು ಖರೀದಿ ಮಾಡಿದ ಆಸ್ತಿಗಳಿಗೆ ನನ್ನದಾಗಲಿ ಮತ್ತು ಉಳಿದ ಪ್ರತಿವಾದಿಗಳದಾಗಲಿ ಯಾವುದೇ ಹಕ್ಕು ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ - ಇಲ್ಲ.

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.